ಪ್ರಮಾಣೀಕರಿಸಲಾದ ದಿನಾಂಕಃ **17.12.2025.**

ಮುಂದುವರೆದ ಪಾಟೀ ಸವಾಲುಃ ಅರ್ಜಿದಾರರ ಪರ ಶ್ರೀ. ಎಸ್. ವಿ. ಎಸ್ ವಕೀಲರಿಂದಃ

ನಾನು ನನ್ನ ಪೊನ್ನಂಪೇಟೆಯಲ್ಲಿ ನನ್ನ ಹೆಸರಿನಲ್ಲಿರುವ ಒಂದು ಮನೆ ಮತ್ತು ಕುಂದ ರಸ್ತೆಯಲ್ಲಿರುವ ನಿವೇಶನ ನನ್ನದೇ ಆಗಿದ್ದು ಅದನ್ನು 30 ಲಕ್ಷ ಹಣಕ್ಕೆ ಮಾರಾಟ ಮಾಡಿರುತ್ತೇನೆ, ಇವುಗಳನ್ನು ಎಷ್ಟು ಹಣಕ್ಕೆ ಮಾರಾಟ ಮಾಡಿದ್ದೇನೆ ನನಗೆ ಗೊತ್ತಿಲ್ಲ. ಈ ಹಣವನ್ನು ಬೆಂಗಳೂರಿನಲ್ಲಿರುವ ಮನೆಯನ್ನು ನವೀಕರಿಸಲು ಖರ್ಚು ಮಾಡಿ ನನ್ನ ಮಗಳಿಗೆ ಕೊಟ್ಟಿರುತ್ತೇನೆ. ಬೆಂಗಳೂರಿನ ನಿವೇಶನ 119 ಬಸವೇಶ್ವರ ನಗರದಲ್ಲಿರುತ್ತದೆ. ಅದರ ಮೌಲ್ಯ ನನಗೆ ಈಗ ಹೇಳಲು ಗೊತ್ತಾಗುತ್ತಿಲ್ಲ. ಸುಮಾರು 1 ವರೆ ಕೋಟಿಯಷ್ಟು ಬೆಲೆ ಬಾಳುತ್ತದೆ. ಕುಂದ ರಸ್ತೆಯಲ್ಲಿರುವ ಮನೆ ಮಾರಾಟ ಮಾಡಿದ ಹಣದಿಂದ Karnataka Gramin ಬ್ಯಾಂಕ್ ಕಿರಗೂರಿನಲ್ಲಿ ಈ ಸಾಲವನ್ನು ತೀರಿಸಿದ್ದೇನೆ. ಈ ಹಿಂದೆ ನನ್ನ ಹೆಸರಿಲ್ಲಿ SBI, Karnataka Bank ಮತ್ತು Canara Bank ಗಳಲ್ಲಿತ್ತು, ಈಗ ಈ ಖಾತೆಗಳು ಚಾಲ್ತಿಯಲ್ಲಿಲ್ಲ. ಈ ದಾಖಲೆಗಳನ್ನು ಹಾಜರುಪಡಿಸಲು ಪ್ರಯತ್ನ ಪಡುತ್ತೇನೆ.

ಮೇಲೆ ಹೇಳಿದ ಪೊನ್ನಂಪೇಟೆ ಮನೆಯ ಮಾರಾಟದ ಕ್ರಯಪತ್ರ ಅದನ್ನು ನೋಡಿ ಒಪ್ಪಿದ್ದು ನಿ ಪಿ 7 ಎಂದು ಗುರುತಿಸಲಾಯಿತು. ಈ ಆಸ್ತಿಯನ್ನು ನನ್ನ ಗಂಡ ಬದುಕಿದ್ದಾಗ ಖರೀದಿಸಿರುತ್ತಾರೆ, ಇದನ್ನು ನಾನು ಮಗಳಿಗೆ ಕೊಟ್ಟಿದ್ದು, ಈಗ ಮಾರಾಟವಾಗಿರುತ್ತದೆ. ಸಾಕ್ಷಿಗೆ ನಾನು ಮತ್ತು ನನ್ನ ಮಗ ಖರೀದಿಸಿರುವ ಆರ್ ಟಿ ಸಿ ದಾಖಲೆಗಳನ್ನು ತೋರಿಸಿ ಒಪ್ಪಿದ್ದು ಅವುಗಳನ್ನು ನಿ ಪಿ 8 ರಿಂದ 10 ಎಂದು ಗುರುತಿಸಲಾಯಿತು, ಅವುಗಳು ನನ್ನ ಮಗಳ ಹೆಸರಿನಲ್ಲಿದ್ದು ಅವು ಹೇಗಾಯಿತು ನನಗೆ ಗೊತ್ತಿಲ್ಲ. ಈ ನಿ ಪಿ 8 ರಿಂದ 10 ಆಸ್ತಿಗಳು ನನ್ನ ಮಗನ ಹೆಸರಿನಲ್ಲಿ ಖರೀದಿಸಲಾಗಿರುತ್ತದೆ. ಸರ್ವೆ ನಂ. 160/4 ರಲ್ಲಿ 2 ಎಕರೆ ಸರ್ವೆ ನಂ. 160/4 ಪಿ2 ರಲ್ಲಿ 1.19 ಎಕರೆ, ಸರ್ವೆ ನಂ. 161/5 ಪಿ 2 ರಲ್ಲಿ 3 ಎಕರೆ 10 ಸೆಂಟ್, ಸರ್ವೆ ನಂ. 161/6 ರಲ್ಲಿ 3 ಎಕರೆ 10 ಸೆಂಟ್, ಸರ್ವೆ ನಂ. 161/7 ರಲ್ಲಿ 3 ಎಕರೆ, ಸರ್ವೆ ನಂ. 161/8 ರಲ್ಲಿ 3 ಎಕರೆ ಒಟ್ಟು 15 ಎಕರೆ 39 ಸೆಂಟ್ ಜಾಗ ಕೋತೂರಿನಲ್ಲಿದೆ ಎಂದರೆ ಸರಿ. ಸರ್ವೆ ನಂ. 155 ರಲ್ಲಿ 7.44 ಎಕರೆ, ಸರ್ವೆ ನಂ. 157/1 ಪಿ 1 ರಲ್ಲಿ 3.50 ಎಕರೆ ಆಸ್ತಿಗಳು ಕಾಲೇಜು ಮಾಡಲು ಖರೀದಿಸಿದ್ದು ಸರಿ, ಆದರೆ ಈಗ ನಾನು ಇದಕ್ಕೆ ಮಾಲೀಕಳಲ್ಲ. ಸಾಕ್ಷಿ

ದಾಖಲೆಯನ್ನು ನೋಡಿ ಒಪ್ಪಿದ್ದು ಅದನ್ನು ನಿ ಪಿ 11 ಎಂದು ಗುರುತಿಸಲಾಯಿತು. ಸಾಕ್ಷಿಗೆ ಇನ್ನೊಂದು ಎಂ. ಆರ್ ದಾಖಲೆ ತೋರಿಸಿ ಅದರಲ್ಲಿರುವ ಆಸ್ತಿಗಳು ನನ್ನ ಮತ್ತು ನನ್ನ ಮಗನ ಹೆಸರಲ್ಲಿ ಜಂಟಿಯಲ್ಲಿತ್ತು ಎಂದು ಒಪ್ಪಿದ್ದು ಅದನ್ನು ನಿ ಪಿ 12 ಎಂದು ಗುರುತಿಸಲಾಯಿತು. ನನ್ನ ಮಗ ತೀರಿಕೊಂಡ ಕಾರಣಕ್ಕೆ ಕೋತೂರು ಗ್ರಾಮದ ಆಸ್ತಿಗಳು ನನ್ನ ಹೆಸರಿಗೆ ಆಗಿದೆ ಎಂದರೆ ಸರಿ. ಸರ್ವೆ ನಂ. 159/6 ಕೋತೂರು ಗ್ರಾಮದಲ್ಲಿರುವ 1 ಎಕರೆ 28 ಸೆಂಟ್ ಅರ್ಜಿದಾರ ಹೆಸರಿಗೆ ಹೇಗೆ ಬಂತು ಗೊತ್ತಿಲ್ಲ. ಸದರಿ ಆಸ್ತಿ ಈಗ ನನ್ನ ಹೆಸರಿನಲ್ಲಿ ಪಂಚಾಯಿತಿ ಪಾಲು ಪಾರಿಕತ್ ನಂತೆ ಆಗಿರುತ್ತದೆ ಎಂದರೆ ಸರಿ. ನಂತರ ಅರ್ಜಿದಾರಳ ಹೆಸರಿನಿಂದ ಈ ಆಸ್ತಿ ವರ್ಗಾವಣೆ ಆಗಿರುತ್ತದೆ ಎಂದರೆ ಸರಿ. ಈ ಎಂ. ಆರ್. ಅನ್ನು ನೋಡಿ ಗುರುತಿಸಿದ್ದು ಅದನ್ನು ನಿ ಪಿ 13 ಎಂದು ಗುರುತಿಸಲಾಯಿತು. ಅರ್ಜಿದಾರಳ ಹೆಸರಿನಲಿದ್ದ ಆರ್ ಟಿ ಸಿ ಯನ್ನು ನೋಡಿ ಗುರುತಿಸಿದ್ದು ಅದನ್ನು ನಿ ಪಿ 14 ಎಂದು ಗುರುತಿಸಲಾಯಿತು.

ನನ್ನ ಮಗ ತೀರಿಕೊಂಡ ನಂತರ ಅರ್ಜಿದಾರಳ ಹೆಸರಿನಲ್ಲಿ ಇದುವರೆಗೂ ಯಾವುದೇ ಆಸ್ತಿ ಇರುವುದಿಲ್ಲ. ಕುಟುಂಬದ ಆಸ್ತಿಗಳನ್ನು ನನ್ನ ಮಗಳ ಹೆಸರಿಗೆ ಕೆಲವೊಂದು ಆಸ್ತಿಗಳನ್ನು ಮಾರಾಟ ಮಾಡಿರುವುದರಿಂದ ಅರ್ಜಿದಾರಳ ಗಂಡ ತೀರಿಕೊಂಡ ನಂತರ ಅವರಿಗೂ ಈ ಆಸ್ತಿಗಳಲ್ಲಿ ಹಕ್ಕುಇದ್ದ ಅವುಗಳನ್ನು ಅವರಿಗೆ ಸೇರಬಾರದೆಂದು ಉದ್ದೇಶದಿಂದ ಈ ರೀತಿ ಮಾಡಿರುತ್ತೇನೆ ಇದು ಕೂಡ ಆಕೆ ಮೇಲೆ ದೌರ್ಜನ್ಯ ಎಸಗಿರುದ್ದಾಗಿರುತ್ತದೆ ಎಂದರೆ ಸರಿಯಲ್ಲ, ಸಾಕ್ಷಿ ಮುಂದುವೆರದು ಅರ್ಜಿದಾರಳು ನನ್ನ ಮಗ ತೀರಿಕೊಂಡ ನಂತರ ಮೈಸೂರಿನಲ್ಲಿ ಇರುವುದಾಗಿ ನಮಗೆ ಹೇಳಿ ಹೋಗಿದ್ದು, ಮೊಮ್ಮಗಳು ಆಕೆಯ ಜೊತೆ ಇದ್ದು ಆಗಾಗ ನಾನು ಕೂಡ ಹೋಗಿ ನೋಡಿಕೊಂಡು ಬರುತ್ತಿದ್ದೆ, ನನ್ನ ಮೊಮ್ಮಗನನ್ನು ನಾನೇ ಸಾಕುತ್ತಿದ್ದೇನೆ. 2018 ರಲ್ಲಿ ನನ್ನ ಮೇಲೆ ಅರ್ಜಿ ದಾರಳು ದೂರು ಕೊಟ್ಟಿದ್ದಕ್ಕೆ ನಮ್ಮ ಆಸ್ತಿಗಳನ್ನು ಉಳಿಸಿಕೊಳ್ಳಲು ನಾನು ಮಗಳ ಹೆಸರಿಗೆ ದಾನಪತ್ರ ಮಾಡಿರುತ್ತೇನೆ.

ಆಸ್ತಿಗಳ ವಿಚಾರಕ್ಕೆ ಮಾರಾಟ ಮಾಡಲು ಒಪ್ಪದೇ ಇರುವುದರಿಂದ ನನ್ನ ಮತ್ತು ಅರ್ಜಿದಾರಳ ನಡುವೆ ಮನಸ್ತಾಪವಾಗಿ ಆದ್ದರಿಂದ ಆಕೆಯನ್ನು ಮಾನಸಿಕ ಮತ್ತು ದೈಹಿಕವಾಗಿ ಹಿಂಸಿಸುತ್ತಿದ್ದೆ ಎಂದರೆ ಸರಿಯಲ್ಲ. ಈ ಕಾರಣಕ್ಕೆ ಅವರನ್ನು ಮನೆಯಿಂದ ಆಚೆ ಹಾಕಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಮೊಮ್ಮಗಳು ಶಾಲೆಯಲ್ಲಿ ಓದುತ್ತಿದ್ದಾಳೆ ಎಂದರೆ ಸರಿ. ವಾರ್ಷಿಕವಾಗಿ ನನ್ನ ಮೊಮ್ಮಗಳಿಗೆ ರೂ. 3 ಲಕ್ಷ ಹಣ ಖರ್ಚು ಬರುತ್ತದೆ ಎಂದರೆ

ಇರಬಹುದು. ಉಳಿದ ಖರ್ಚುಗಳು ಮತ್ತೆ 3 ರಿಂದ 4 ಲಕ್ಷ ಹಣ ವಾರ್ಷಿಕವಾಗಿ ಬೇಕಾಗುತ್ತದೆ ಎಂದರೆ ಖರ್ಚು ಮಾಡಲು ಮಿತಿಇಲ್ಲದಿದ್ದರೆ ಬೇಕಾಗುತ್ತದೆ. ಅರ್ಜಿದಾರಳು ಅವರ ತಂದೆ ಮನೆಯಲ್ಲಿದ್ದು ಆಕೆಗೆ ಬೇರೆ ಮನೆ ಅವಶ್ಯಕತೆ ಇರುತ್ತದೆ ಎಂದರೆ ಆಕೆ ಹೇಳಿದಂತೆ ಆಕೆಗೆ ಒಂದು ಪ್ಲಾಟ್ ಇದೆ. ನನ್ನ ಮನೆಯಲ್ಲಿ ಅರ್ಜಿದಾರಳು ಇರಲು ನನಗೆ ಅಭ್ಯಂತರವಿಲ್ಲ. ಈ ಪ್ರಕರಣ ಹಾಕಿದ ನಂತರ ಒಂದೇ ಮನೆಯಲ್ಲಿ ಇರಲು ಸಾಧ್ಯವಿಲ್ಲ ನನ್ನ ಮನೆಯ ಪಕ್ಕದಲ್ಲಿ ಇನ್ನೊಂದು ಮನೆ ಇದ್ದು ಅಲ್ಲಿ ಇರಬಹುದು. ನನ್ನ standard of living ಪ್ರಕಾರ ಅರ್ಜಿದಾರಳಿಗೆ ಅಂತಹ ಮನೆಯೇ ಕೊಡಲು ಯಾವುದು ಇಲ್ಲ. ಅರ್ಜಿದಾರಳಿಗೆ ಓಡಾಡಲು ವಾಹನ ಇಲ್ಲದಿದ್ದರೆ ನನ್ನ ಬಳಿ ಇರುವ ವಾಹನಗಳನ್ನು ಕೊಡಲು ಸಿದ್ಧಳಿದ್ದೇನೆ. ಕೌಟುಂಬಿದ ದೌರ್ಜನ್ಯವಾಗಿರುತ್ತದೆ ಎಂದರೆ ಅಂತಹ ಘಟನೆ ಯಾವುದು ಆಗಿಲ್ಲ ನಾನು ಅವಳ ಮನೆಗೆ ಹೋದಾಗ ಮೊಮ್ಮಗಳನ್ನು ನೋಡದೇ ಬಿಡದೆ ನನಗೂ ಹಿಂಸೆ ಯಾಗಿರುತ್ತದೆ ಎಂದರೆ ಸರಿ. ಆದ್ದರಿಂದ ಅರ್ಜಿದಾರಳಿಗೆ ಅರ್ಜಿಯಲ್ಲಿ ಕೋರಿರುವಂತೆ ಪರಿಹಾರ ಕೊಡಲು ಅರ್ಹಳು ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇರುವುದಿಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚಿಸಿದೆ)

**Sd/-**
ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಪೊನ್ನಂಪೇಟೆ